ತೀರ್ಥಹಳ್ಳಿ ತಾಲ್ಲೂಕು ಆಗ್ರಹಾರ ಹೋಬಳಿ ಕರಡಿಗೆ ಗ್ರಾಮದ ಸರ್ವೆ ನಂ. ೫೩ರಲ್ಲಿನ ಜಮೀನಿನ ವಿಸ್ತೀರ್ಣದ ಬಗ್ಗೆ

೧೦೨೨. ಶ್ರೀ ಆರ್. ಎನ್. ನಾಯಕ್ (ಭಟ್ಕಳ).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತೀರ್ಥಹಳ್ಳಿ ತಾಲ್ಲೂಕಿನ ಹೋಬಳಿ, ಕರಡಿಗ ಗ್ರಾಮದ ಸರ್ವೆ ನಂ. ೫೩ರ ವಿಸ್ತೀರ್ಣ ಪೈಷ್ಟು ?

ಆ) ಸದರೀ ಸರ್ವೆ ನಂಬರಿನಲ್ಲಿ ಎಷ್ಟು ಕ್ಷೇತ್ರ ಕಂದಾಯ ಇಲಾಖೆಗೆ ಸೇರಿದೆ ಹಾಗೂ ಎಷ್ಟು ಅರಣ್ಯ ಇಲಾಖೆಗೆ ಸೇರಿದೆ ? ಉಳಿದ ಯಾವುದಾದರೂ ಇಲಾಖೆಗೆ ಈ ಜಮೀನು ಸೇರಿದೆಯೇ ?

ಇ) ಖಾಸಗಿಯವರಿಗೆ ಈ ಸ್ಥಳದಲ್ಲಿ ಎಷ್ಟು ಕ್ಷೇತ್ರವನ್ನು ಸಾಗುವಳಿಗೆ ನೀಡಲಾಗಿದೆ ?

ಈ) ಸದರೀ ಸ್ಥಳವನ್ನು ಸಾಗುವಳಿಗಾಗಿ ಕೋರಿ ಯಾರ್ಯಾರು ಅರ್ಜಿಸಲ್ಲಿಸಿರುತ್ತಾರೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ೧೯೭ ಎಕರೆ ೩೨ ಗುಂಟೆ

ಆ) ಸದರೀ ೧೯೭ ಎಕರೆ ೩೨ ಗುಂಟೆ ವಿಸ್ತೀರ್ಣದಲ್ಲಿ ೧೮೨ ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ಸೇರಿರುತ್ತದೆ. ಉಳಿದ ೧೩ ಎಕರೆ ೩೮ ಗುಂಟೆ ವಿಸ್ತೀರ್ಣದ ಜಮೀನು ಕಂದಾಯ ಇಲಾಖೆಯ ವಶದಲ್ಲಿದೆ.

ಇ) ೧ ಎಕರೆ ೩೪ ಗುಂಟೆ

ಈ) ಶ್ರೀ ಗುಂಡನಾಯ್ಕ ಬಿನ್ ಪೋಟನಾಯ್ಕ ಎಂಬುವವರು ಮಾತ್ರ ಅರ್ಜಿಸಲ್ಲಿಸಿರುತ್ತಾರೆ.

ಶ್ರೀ ಆರ್. ಎನ್. ನಾಯ್ಕ.— ಮಾನ್ಯ ಅಧ್ಯಕ್ಷರೆ, ಈ ಸಂಬಂಧಪಟ್ಟ ಜಮೀನನ್ನು ಪಹಣಿ ಪತ್ರಿಕೆಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಬಗ್ಗೆ ದಾಖಲಾತಿ ಇದೆಯೇ ? ಹಾಗೆಯೇ ಎರಡನೆಯೆಂದಾಗಿ, ಅರಣ್ಯ ಇಲಾಖೆಗೆ ಈ ರಾಜ್ಯದಲ್ಲಿ ರೆವಿನ್ಯೂ ಇಲಾಖೆಗೆ ಸೇರಿದ ಜಮೀನನ್ನು ಹಿಂದಕ್ಕೆ ಕೊಡುವಂಥ ಪರಿಪಾಠವನ್ನು ಸರಕಾರ ಇಟ್ಟುಕೊಂಡಿದೆ, ಅದನ್ನು ನೀವು ಸಹ ಮಾಡುತ್ತೀರಾ ? ರೆವಿನ್ಯೂ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರೆ ಸಾರ್ವಜನಿಕರಿಗೆ ಜಮೀನು ಇಲ್ಲದಂತಾಗುತ್ತದೆ. ಆದುದರಿಂದ ಹೀಗೆ ಅರಣ್ಯ ಇಲಾಖೆಗೆ ಹಸ್ತಾಂತರಿಸುವುದನ್ನು ತಡೆಹಿಡಿದು ನಿಮ್ಮ ಇಲಾಖೆಗೆ ಸಂಬಂಧಪಟ್ಟ ಜಮೀನನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮತ್ತು ಈ ಬಗ್ಗೆ ಅರ್ಜಿ ಸಲ್ಲಿಸಿದವರಿಗೆ ಆ ಭೂವಿಲಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೀರಿ. ಕಂದಾಯ ಇಲಾಖೆಯ ವಶದಲ್ಲಿ ೧೩.೩೮ ಗುಂಟೆ ಇದೆ ಎಂದು ಹೇಳಿದ್ದೀರಿ, ಹಾಗಾದರೆ ನಿಮ್ಮ ವಶದಲ್ಲಿರುವ ಆ ಜಮೀನನ್ನು ಯಾರು ಅರ್ಜಿಸಲ್ಲಿಸಿದ್ದಾರೋ ಅವರಿಗೆ ಸಾಗುವಳಿ ಮಾಡುವುದಕ್ಕೆ ಕೊಡಲು ತಯಾರಾಗಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಸರಕಾರ ಬಂದಮೇಲೆ ಒಂದು ಎಕರೆಯಷ್ಟು ಕೂಡ ಕಂದಾಯ ಇಲಾಖೆಗೆ ಸೇರಿದ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲಿಲ್ಲ. ೧೯೭೮ನೇ ಇಸವಿಯಲ್ಲಿ ೨೫ ಲಕ್ಷ ಎಕರೆ ಸಿ. ವಂತ್ತು ಡಿ. ಕ್ಲಾಸ್ ಜಮೀನನ್ನು ವರ್ಗಾವಣೆ ಮಾಡಿದ್ದಾರೆ. ಆ ಕಾಲಕ್ಕೆ ಈ ಜಮೀನು ವರ್ಗಾವಣೆ ಆಗಿದೆ. ಈ ವಿಚಾರದ ಕುರಿತು ಈ ಮನೆಯು ಮೂಲಕ ಸಾರ್ವಜನಿಕರಿಗೆ ಗವಂನಕ್ಕೆ ಒಂದು ವಿಷಯವನ್ನು ತರಬಯಸುವುದೇನೆಂದರೆ,
ಅರಣ್ಯ ಇಲಾಖೆಗೆ ಟ್ರಾನ್ಸ್‌ಫರ್ ಮಾಡಿದಂತಹ ಜಮೀನಿನಲ್ಲಿ ಕೂಡ ಅನೇಕ ಜನ ಅತಿಕ್ರಮಣ ಮಾಡಿದ್ದಾರೆ ಸಾಗುವಳಿ ಮಾಡಿದ್ದಾರೆ ಮನೆ ಮಾಡಿದ್ದಾರೆ ತೋಟ ಮಾಡಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ. ನನ್ನ ಅಭಿಪ್ರಾಯದಲ್ಲಿ ರಾಜ್ಯ ಸರಕಾರವೇ ಪುನಃ ಇದನ್ನು ವಾಪಸ್ ತೆಗೆದುಕೊಳ್ಳಬಹುದೆಂದು ನಿಯಮ ಇದೆ. ಅರಣ್ಯ ಇಲಾಖೆಯಿಂದ ವಾಪಸ್ ತೆಗೆದುಕೊಂಡು ಯಾರ್ಯಾರು ಅತಿಕ್ರಮಣ ಮಾಡಿದ್ದಾರೆ ಅದನ್ನು ಸಕ್ರಮಗೊಳಿಸತಕ್ಕಂಥಾದ್ದು ವಂತ್ತು ಉಳಿದ ಜಮೀನನ್ನು ಹಂಚತಕ್ಕಂಥಾದ್ದು ಸರ್ಕಾರದ ಗವನದಲ್ಲಿದೆ ತಾವು ಏನು ಹೇಳಿದ್ದೀರಿ ೧೩ ಎಕರೆ ಜಮೀನು ಎಂದು ಅದನ್ನು ಪರಿಶೀಲನೆ ಮಾಡಿಕೊಡಂತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮಂತ್ರಿಗಳು ಹೇಳಿದ ವಿಚಾರದಲ್ಲಿ ನನಗೆ ಸಂತೋಷವಾಗಿದೆ. ರೆಕಾರ್ಡಿನಲ್ಲಿ ರೆವಿನ್ಯೂ ಲ್ಯಾಂಡ್ ಎಂದು ಇದ್ದರೂ ಕೂಡ ಫಾರೆಸ್ಟ್ ಇಲಾಖೆಗೆ ಹೋಗಿದೆ ಎಂದು ಮಂಜೂರು ಕೊಡುವಾಗ ಸರಕಾರೀ ಅಧಿಕಾರಿಗಳು ತೋರಿದರೆ ಕೊಡುತ್ತಾರೆ ಇಂತಹ ವಿಚಾರದಲ್ಲಿ ಸುತ್ಕೋಲೆ ಹೊರಡಿಸಿ ಇದು ರೆವಿನ್ಯೂ ಲ್ಯಾಂಡ್. ಫಾರೆಸ್ಟ್ ಇಲಾಖೆಯದಲ್ಲ ಎಂದು ತಿಳಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಒಂದೇ ಜಮೀನು ಅಲ್ಲ. ೨೫ ಲಕ್ಷ ಎಕರೆ ಬಗ್ಗೆ ಸರಕಾರೀ ಆಜ್ಞೆಯಾಗಿದೆ. ಬಹುತೇಕ ಜಮೀನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಖಾತೆ ಬದಲಾವಣೆಯಾಗಿದೆ ಆ ಆಜ್ಞೆಯನ್ನು ಪುನರ್ ವಿಮರ್ಶೆ ಮಾಡುವುದು ಕೇಂದ್ರ ಸರಕಾರದ ಅಧಿಕಾರಕ್ಕೆ ಬರುತ್ತದೆಂದು ಅಭಿಪ್ರಾಯ ಇತ್ತು ಆ ಅಭಿಪ್ರಾಯ ನನ್ನದು ಅಲ್ಲ. ಕೆಲವು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಏನು ವರ್ಗಾವಣೆ ಮಾಡಿದ್ದಾರೆ. ಎಲ್ಲಿ ಅತಿಕ್ರಮಣ ಮಾಡಿದ್ದಾರೆ, ಅದನ್ನು ವಾಪಸ್ ತೆಗೆದುಕೊಂಡು ಸಕ್ರಮಗೊಳಿಸತಕ್ಕಂತಹ ವಿಚಾರದ ಮಸೂದೆ ಈ ಮನೆಯ ಮುಂದೆ ಇದೆ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ತಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರೊಳಗೆ ಏನು ಇದೆ ಕನ್ಸ್ಟ್ರಕ್ಷನ್ ಬಗ್ಗೆ ಮಾತ್ರ ನಾನು ಕೇಳಿರುವುದು.

ಶ್ರೀ ಜಿ. ಬಸವಣ್ಣಪ್ಪ.—ಕೆಲವು ಜಿಲ್ಲೆಗಳಿಂದ ಎನ್.ಆರ್.ಇ.ಪಿ. ಯೋಜನೆಗಳ ಬಗ್ಗೆ ವಿವರ ಬರಬೇಕಾಗಿದೆ. I agree, it is an important question you can renew this question. I have asked for detailed information.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಾಗಿದ್ದರೆ ೩೦ನೇ ತಾರೀಖು ತೆಗೆದುಕೊಳ್ಳಿ.

ಸರಕಾರಿ ಆದೇಶದ ಸಂಖ್ಯೆ ಎಸ್. ಡಬ್ಲ್ಯೂ. ಎಲ್. ೧೯೪ ಎಸ್. ಇ, ಡಬ್ಲ್ಯೂ. ೮೩.

೧೦೩೭. ಶ್ರೀ ಗೋಪಾಲಮಯ್ಯಂದ ಕಾನಡೆ(ಸಿರ್ಸಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆದೇಶ ಸಂಖ್ಯೆ ಎಸ್. ಡಬ್ಲ್ಯೂ. ಎಲ್. ೧೯೪ ಎಸ್.ಇ.ಡಬ್ಲ್ಯೂ. ೮೩ ದಿನಾಂಕ ೨೬-೧೧-೧೯೮೩ರ ಪ್ರಕಾರ ಬುಡಕಟ್ಟು (ಆಲೆಮಾರಿ ಜನಾಂಗ) ಜನಾಂಗದವರಿಗೆ ಕೊಡಲಾಗುತ್ತಿರುವ ವಿಶೇಷ ಸೌಲಭ್ಯವನ್ನು ನಿಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಅದಕ್ಕೆ ಕಾರಣವೇನು? ಹಾಗೂ ಅದನ್ನು ಪುನ: ಜಾರಿಗೊಳಿಸಲಾಗುವುದೆ?

ಆ) ಆಲೆ ಮಾರಿ ಜನಾಂಗಕ್ಕೆ ಸರಕಾರದವರು ಸಾಮಾಜಿಕವಾಗಿ, ಆರ್ಥಿಕವಾಗಿ ಯಾವ ವಿಧವಾದ ಸೌಲಭ್ಯ ನೀಡುತ್ತಿದ್ದಾರೆ.

ಇ) ಗ್ರೂಫ್ ಎ ಜನಾಂಗದವರಿಗೆ ಆದಾಯ ಮಿತಿ ಇರುವುದಿಲ್ಲ ಆದರೆ ಹಿಂದುಳಿದ ಇಲಾಖೆಯ ನಿರ್ದೇಶಕರು ಸರಕಾರದ ಆದೇಶದ ವಿರುದ್ಧವಾಗಿ ಆದಾಯ ಮಿತಿ ಹೇರಲು ಶಿಫಾರಸ್ಸು ಮಾಡಿರುವುದು ನಿಜವೆ.

ಈ) ನೋಮಿಡಿಕ್, ಅಂಡ್ ಡೀ ನೋಟಿಫೈಡ್ ಟ್ರೈಬ್ಸ್ (ಬುಡಕಟ್ಟು ಜನಾಂಗ, ಬಿ ಟಿ) ಇವರಿಗೆ ಪ್ರತ್ಯೇಕ ಸೌಲಭ್ಯದ ಬಗ್ಗೆ, ಇದುವರೆಗೂ ಯಾವುದೇ ವಿಶೇಷ ಯೋಜನೆ ರೂಪಿಸಿ ಕಾರ್ಯಗತ ಮಾಡಿರುವುದಿಲ್ಲ ದಿರುವುದಕ್ಕೆ ಕಾರಣವೇನು?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು

ವಿವರಗಳನ್ನು ಅನುಬಂಧ (೧) ರಲ್ಲಿ ನೋಡಬಹುದು

ಆ) ಹೌದು

ವಿವರಗಳನ್ನು ಅನುಬಂಧ (೨) ರಲ್ಲಿ ನೋಡಬಹುದು.